# ಹುಬ್ಬಳ್ಳಿಯಲ್ಲಿ ಹೊರಟ್ಟಿ ಭರ್ಜರಿ ರೋಡ್‌ಶೋ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ವಿಧಾನಪರಿಷತ್ ಪಶ್ಚಿಮ ಶಿಕ್ಷಕರ ಕ್ಷೇತ್ರ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ ಬಸವರಾಜ ಹೊರಟ್ಟಿ ಬುಧವಾರ ರಾತ್ರಿ ನಗರದಲ್ಲಿ ಭರ್ಜರಿ ರೋಡ್ ಶೋ ನಡೆಸಿದರು.

ನಗರಕ್ಕೆ ಆಗಮಿಸುತ್ತಿದ್ದಂತೆ ಬಿಜೆಪಿ ಮುಖಂಡರು ಅದ್ದೂರಿ ಸ್ವಾಗತ ಕೋರಿದರು. ಮೊದಲು ಇಲ್ಲಿನ ದೇಶಪಾಂಡೆ ನಗರದ ಪಕ್ಷದ ಕಚೇರಿಗೆ ಭೇಟಿ ನೀಡಿದ ಅವರಿಗೆ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ ಟೆಂಗಿನಕಾಯಿ ಸಿಹಿ ತಿನ್ನಿಸಿ, ಹಾರ ಅರ್ಪಿಸಿ ಸನ್ಮಾನಿಸಿ ಶುಭ ಕೋರಿದರು.

ಈ ವೇಳೆ ಮಾತನಾಡಿದ ಹೊರಟ್ಟಿ, ನನ್ನ ಅಧಿಕಾರವಧಿಯಲ್ಲಿ ಯಾರೇ ಮನೆಗೆ ಬಂದು ಸಮಸ್ಯೆ ಎಂದರೂ ಅವರಿಗೆ ಕೆಲಸ ಮಾಡಿ ಕೊಡುತ್ತೇನೆ. ಬಿಜೆಪಿ ಶಿಸ್ತಿನ ಪಕ್ಷವಾಗಿದ್ದು, ಚುನಾವಣೆಯಲ್ಲಿ ಶಿಕ್ಷಕರ ಒಡಗೂಡಿ ಕಾರ್ಯಕರ್ತರು ಉತ್ತಮವಾಗಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರು. ಮುಂದಿನ ದಿನಗಳಲ್ಲಿ ಪಕ್ಷದಿಂದ ಯಾವುದೇ ಕಾರ್ಯ ಚಟುವಟಿಕೆ ಹಮ್ಮಿಕೊಂಡರೂ ಅದಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ಅವರು ತಿಳಿಸಿದರು.ಮಹೇಶ ಟೆಂಗಿನಕಾಯಿ ಮಾತನಾಡಿ, ಬಿಜೆಪಿ ಹಾಗೂ ಹೊರಟ್ಟಿ ಸೇರಿರುವುದು ಹಾಲು ಸಕ್ಕರೆಯಲ್ಲಿ ಬೆರೆತಂತಾಗಿದೆ. ಇದರಿಂದಾಗಿ ಪಕ್ಷದ ಬಲ ಹೆಚ್ಚಿದೆ. ಮುಂದಿನ ದಿನಗಳಲ್ಲಿ ಶಿಕ್ಷಕರ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲು ಅವರ ಜೊತೆಗೂಡಿ ಕೆಲಸ ಮಾಡುತ್ತೇವೆ ಎಂದರು. ಪಕ್ಷದ ಕಚೇರಿಯಿಂದ ಚೆನ್ನಮ್ಮ ವೃತ್ತಕ್ಕೆ ಆಗಮಿಸಿದ ಹೊರಟ್ಟಿಯವರು ಚೆನ್ನಮ್ಮ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ಪಟಾಕಿ ಸಿಡಿಸಿ ಸಂಭ್ರಮಿಸಿದ ಅಭಿಮಾನಿಗಳು ಪುಷ್ಪವೃಷ್ಟಿಗೈದರು. ಬಳಿಕ ತೆರೆದ ವಾಹನದಲ್ಲಿ ಪಿಂಟೋ ರಸ್ತೆಯಲ್ಲಿನ ತಮ್ಮ ಮನೆವರೆಗೆ ಮೆರವಣಿಗೆಯಲ್ಲಿ ಪಾಲ್ಗೊಂಡರು. ಅವರಿಗೆ ಶಿಕ್ಷಕ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು ಸಾಥ್ ನೀಡಿದರು. ಹೊರಟ್ಟಿ ಪರವಾಗಿ ಘೋಷಣೆ, ಹರ್ಷೋದ್ಗಾರ ಮುಗಿಲುಮುಟ್ಟಿತ್ತು.

### ಬಿಜೆಪಿಯದ್ದು ದಾಖಲೆ

**ಹುಬ್ಬಳ್ಳಿ:** ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಕೂಡ ಮೊದಲ ಬಾರಿಗೆ ಗೆಲ್ಲುವ ಮೂಲಕ ದಾಖಲೆ ಸೃಷ್ಟಿಸಿದೆ. ಈ ಹಿಂದೆ ಹೊರಟ್ಟಿ ವಿರುದ್ಧ ಬಿಜೆಪಿ ಸೆಣಸಾಡುತ್ತಿತ್ತು. ಕಳೆದ ಮೂರು ಚುನಾವಣೆಯಲ್ಲಿ ಹೊರಟ್ಟಿ ಅವರಿಗೆ ಬಿಜೆಪಿಯೇ ಎದುರಾಳಿಯಾಗುತ್ತಿತ್ತು. ಇದೀಗ ಹೊರಟ್ಟಿ ಅವರೇ ಬಿಜೆಪಿಯಿಂದ ಸ್ಪರ್ಧಿಸಿ ಗೆಲುವು ಕಂಡಿದ್ದಾರೆ. ಹೀಗಾಗಿ ಈ ಕ್ಷೇತ್ರದಲ್ಲಿ ಮೊಟ್ಟ ಮೊದಲ ಬಾರಿಗೆ ಬಿಜೆಪಿ ಗೆಲುವು ಕಂಡಂತಾಗಿದೆ. ಈ ಮೂಲಕ ಬಿಜೆಪಿ ಕೂಡ ದಾಖಲೆ ಮಾಡಿದಂತಾಗಿದೆ. ಇನ್ನೂ ಹೊರಟ್ಟಿ 1980 ರಿಂದ ಈವರೆಗೆ ಒಟ್ಟು ನಾಲ್ಕು ಪಕ್ಷಗಳಿಂದ ಚುನಾವಣೆಯಲ್ಲಿ ಸ್ಪರ್ಧಿಸಿದಂತಾಗಿದೆ. ಮೊದಲ ಬಾರಿಗೆ ಅಂದರೆ 1980ರಲ್ಲಿ ಪಕ್ಷೇತರರಾಗಿ, 1986ರಲ್ಲಿ ಜನತಾ ದಳ, 1992ರಲ್ಲಿ ಲೋಕಶಕ್ತಿ, 1998, 2004 ಹಾಗೂ 2016ರಲ್ಲಿ ಜೆಡಿಎಸ್‌ನಿಂದ ಗೆಲುವು ಕಂಡವರಿವರು. ಈ ಸಲ 2022ರಲ್ಲಿ ಬಿಜೆಪಿಯಿಂದ ಗೆಲುವು ಸಾಧಿಸಿದ್ದಾರೆ.

ಹುಬ್ಬಳ್ಳಿ ಬಿಜೆಪಿ ಕಚೇರಿಯಲ್ಲಿ ಬಸವರಾಜ ಹೊರಟ್ಟಿ ಅವರಿಗೆ ಸನ್ಮಾನಿಸಲಾಯಿತು.

# ಗುರುವಿನ ಎದುರು ಠೇವಣಿ ಕಳೆದುಕೊಂಡ ಗಡದಿನ್ನಿ

## ಹೊರಟ್ಟಿ ಶಿಷ್ಯನನ್ನೇ ನಿಲ್ಲಿಸಿ ಹೊರೆ ಇಳಿಸಿಕೊಂಡ ಮಹಿಳೆ | ಉಕದಲ್ಲಿ ಜೆಡಿಎಸ್ ಅಸ್ತಿತ್ವದ ಪ್ರಶ್ನೆ ಶುರು

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ವಿಧಾನಪರಿಷತ್‌ನಲ್ಲಿ ತನ್ನದೇ ದಾಖಲೆಯನ್ನು ಮುರಿದು ಹೊಸ ದಾಖಲೆ ಸೃಷ್ಟಿಸಿದವರು ಬಸವರಾಜ ಹೊರಟ್ಟಿ. ಬರೋಬ್ಬರಿ 4 ದಶಕಗಳ ಜನತಾ ಪರಿವಾರದ ಸಂಬಂಧ ಕಡಿದುಕೊಂಡು ಬಿಜೆಪಿಯಿಂದ ನಿಂತು ಗೆಲುವು ಕಂಡಿದ್ದಾರೆ. ಇವರನ್ನು ಹೇಗಾದರೂ ಮಾಡಿ ಸೋಲಿಸಿ ಪಾಠ ಕಲಿಸಬೇಕೆಂಬ ಹಟದಿಂದ ಕಣಕ್ಕಿಳಿಸಿದ್ದ ಜೆಡಿಎಸ್ ಉತ್ತರ ಕರ್ನಾಟಕದಲ್ಲಿ ಅಕ್ಷರಶಃ ಮುಖಭಂಗ ಅನುಭವಿಸುವಂತಾಗಿದೆ.

4 ದಶಕಗಳಿಂದ ಜನತಾ ಪರಿವಾರದ ಸಂಬಂಧ ಹೊಂದಿದ್ದ ಹೊರಟ್ಟಿ, ಈ ಭಾಗದಲ್ಲಿ ಜೆಡಿಎಸ್ ಎಂದರೆ ಥಟ್ಟನೆ ನೆನಪಾಗುವುದು ಹೊರಟ್ಟಿ ಎಂಬಂತಿತ್ತು. ಎಷ್ಟೇ ಪ್ರಯತ್ನ ಪಟ್ಟರೂ ಜೆಡಿಎಸ್ ಮಾತ್ರ ಸಂಘಟನೆ ಆಗುತ್ತಲೇ ಇರಲಿಲ್ಲ. ಪ್ರತಿ ಚುನಾವಣೆಯಲ್ಲೂ ಹೊರಟ್ಟಿ ಬಿಟ್ಟರೂ ಉಳಿದವರೆಲ್ಲರೂ ಸೋಲುವುದು ಗ್ಯಾರಂಟಿ ಎಂಬಂತಾಗಿತ್ತು. ಹೀಗಾಗಿ ಸುಮ್ಮನೆ ಇಲ್ಲಿರುವುದು ವ್ಯರ್ಥ ಎಂದುಕೊಂಡು ಈ ಸಲ ಪರಿಷತ್ ಚುನಾವಣೆ ವೇಳೆ ಹೊರಟ್ಟಿ ಬಿಜೆಪಿಗೆ ವಲಸೆ ಹೋದರು. ಅಲ್ಲಿನವರು ಅತ್ಯಂತ ಆತ್ಮೀಯವಾಗಿ ಬರಮಾಡಿಕೊಂಡರು. ಈ ನಡುವೆ ಜೆಡಿಎಸ್ ಬಿಟ್ಟು ಹೋದ ಹೊರಟ್ಟಿಗೆ ತಕ್ಕ ಪಾಠ ಕಲಿಸಬೇಕೆಂಬ ಹಠತೊಟ್ಟಿತ್ತು.

ಇದಕ್ಕಾಗಿ ಒಂದು ಕಾಲದಲ್ಲಿ ಹೊರಟ್ಟಿ ಶಿಷ್ಯನೇ ಆಗಿದ್ದ, ಅವರೊಂದಿಗೆ 5 ಚುನಾವಣೆಗಳಲ್ಲಿ ಓಡಾಡಿದ್ದ ಶ್ರೀಶೈಲ ಗಡದಿನ್ನಿ ಇತ್ತೀಚಿನ ವರ್ಷದಲ್ಲಿ ಹೊರಟ್ಟಿ ಅವರೊಂದಿಗೆ ಮುನಿಸಿಕೊಂಡಿದ್ದರು. ಹೊರಟ್ಟಿ ಅವರ ಸಂಘಟನೆಗೆ ಪರ್ಯಾವಾಗಿ ಸಂಘಟನೆಯನ್ನು ಹುಟ್ಟುಹಾಕಿದ್ದರು. ಹೊರಟ್ಟಿ ಅವರೊಂದಿಗಿನ ಗಡದಿನ್ನಿಯ ಮುನಿಸಿನ ಬಗ್ಗೆ ಅರಿತ ಜೆಡಿಎಸ್, ಇವರನ್ನು ಕಣಕ್ಕಿಳಿಸಿದರೆ ಹೊರಟ್ಟಿಗೆ ಪಾಠ ಕಲಿಸಬಹುದು. ಚುನಾವಣೆಯಲ್ಲಿ ತಾನೂ ಗೆಲ್ಲದಿದ್ದರೂ ಹೊರಟ್ಟಿ ಮತಗಳನ್ನು ಇವರು ತೆಗೆದುಕೊಂಡರೆ ಕಾಂಗ್ರೆಸ್‌ಗೆ ಅನುಕೂಲವಾಗುತ್ತದೆ. ಕಾಂಗ್ರೆಸ್ ಗೆದ್ದರೂ ಪರವಾಗಿಲ್ಲ. ಪಕ್ಷವನ್ನು ನಡುನೀರಲ್ಲಿ ಬಿಟ್ಟು ಹೋಗಿರುವ ಹೊರಟ್ಟಿ ಅವರ ಸೋಲು ಮುಖ್ಯ ಎಂದುಕೊಂಡು ಗಡದಿನ್ನಿ ಅವರನ್ನು ಪಕ್ಷದಿಂದ ಕಣಕ್ಕಿಳಿಸಿತ್ತು.

**ಠೇವಣಿ ಕಳೆದುಕೊಂಡ ಶಿಷ್ಯ :** ಬಿಜೆಪಿ ಸಂಘಟನೆ, ಹೊರಟ್ಟಿ ವರ್ಚಸ್ಸಿನ ಮುಂದೆ ಅವರ ಶಿಷ್ಯ, ನನಗೆ ಹಾಗೂ ಶಿಕ್ಷಕ ಸಮುದಾಯಕ್ಕೆ ಹೊರಟ್ಟಿ ಅವರಿಂದ ಅನ್ಯಾಯವಾಗಿದೆ ಎಂದು ಹೇಳಿಕೊಂಡು ಗಡದಿನ್ನಿ ಪ್ರಚಾರ ಮಾಡಿದ್ದರು. ಇನ್ನು ಒಂದು ಹಂತದಲ್ಲಿ ಇವರು ಗೆದ್ದೇ ಬಿಡುತ್ತಾರೆ ಎಂಬ ವಿಶ್ವಾಸ ಕುಮಾರಸ್ವಾಮಿಗೂ ಇತ್ತು. ಅದಕ್ಕಾಗಿ ತಾವೇ ಸ್ವತಃ ಆಗಮಿಸಿ ಎರಡು ದಿನ ಕ್ಷೇತ್ರದಲ್ಲಿ ಪ್ರಚಾರ ಕೂಡ ಮಾಡಿ ಹೊರಟ್ಟಿ ವಿರುದ್ಧ ಆರೋಪಗಳ ಸುರಿಮಳೆ ಸುರಿಸಿದ್ದುಂಟು.

ಆದರೆ ಇವರ ಮಾತಿಗೆ ಮತದಾರ ಮರಳಾಗಲಿಲ್ಲ. ಹೊರಟ್ಟಿ ಅವರ ಮತ ಕಸಿಯಲು ಸಾಧ್ಯವಾಗಲಿಲ್ಲ. ಕನಿಷ್ಠ ಪಕ್ಷ ಮೂರಂಕಿಯನ್ನೂ ದಾಟಲು ಸಾಧ್ಯವಾಗಲಿಲ್ಲ. ಈ ಮೂಲಕ ಜೆಡಿಎಸ್ ತೀವ್ರ ಮುಖಭಂಗ ಅನುಭವಿಸುವಂತಾಗಿದೆ ಅಲ್ಲದೇ, ಜೆಡಿಎಸ್ ಅಸ್ತಿತ್ವದ ಪ್ರಶ್ನೆ ಎದುರಾಗಿದೆ.

ಇದೀಗ ಮುಂದೆ 2023ರಲ್ಲಿ 123ರ ಗುರಿ ಇಟ್ಟುಕೊಂಡು ಕುಮಾರಸ್ವಾಮಿ ಮುನ್ನುಗ್ಗುತ್ತಿದ್ದಾರೆ. ಹಳೆ ಮೈಸೂರು ಭಾಗದಲ್ಲಿ ಉತ್ತಮ ಪ್ರತಿಕ್ರಿಯೆ ಕೂಡ ವ್ಯಕ್ತವಾಗುತ್ತಿದೆ. ಆದರೆ ಉತ್ತರ ಕರ್ನಾಟಕದಲ್ಲಿ ಮಿಲಾಪಿ ರಾಜಕಾರಣದಲ್ಲಿ ನಿರತವಾಗಿರುವ ಜೆಡಿಎಸ್ ಮುಖಂಡರನ್ನು ಅದ್ದೇಗೆ ಸರಿದಾರಿಗೆ ತಂದು ತಮ್ಮ ಗುರಿ ಮುಟ್ಟುತ್ತಾರೆ ಎಂಬುದನ್ನು ಕಾಯ್ದು ನೋಡಬೇಕಷ್ಟೇ!

# ಧಾಮುಲ್; ಪ್ಲಾಸ್ಟಿಕ್ ಪ್ಯಾಕೆಟ್ ಸಂಗ್ರಹಕ್ಕೆ ಚಿಂತನೆ

## ಹಾಲು, ಮೊಸರಿನ ಪ್ಯಾಕೆಟ್ ಗ್ರಾಹಕರಿಂದ ಮರುದಿನ ಸಂಗ್ರಹ, ಮರುಬಳಕೆಗೆ ನೀಡಲು ಕ್ರಮ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಹಾಲು, ಮೊಸರು ಸೇರಿ ಇನ್ನಿತರೆ ಉತ್ಪನ್ನಗಳ ಪ್ಲಾಸ್ಟಿಕ್ ಪ್ಯಾಕೆಟ್‌ಗಳನ್ನು ಗ್ರಾಹಕರಿಂದ ಸಂಗ್ರಹಿಸುವ ಕುರಿತು 'ಧಾರವಾಡ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘ'ಗಳ ಒಕ್ಕೂಟ (ಧಾಮುಲ್) ಚಿಂತನೆ ನಡೆಸಿದೆ.

ಎಸ್‌ಯುಪಿ (ಸಿಂಗಲ್ ಯೂಸ್ ಪ್ಲಾಸ್ಟಿಕ್) ಕುರಿತಂತೆ ಸರ್ಕಾರ ಮುಂದಿನ ದಿನಗಳಲ್ಲಿ ಆದೇಶಿಸಬಹುದಾದ ಕಾನೂನಿಗೆ ಅನುಗುಣವಾಗಿ ಈಗಿನಿಂದಲೆತಯಾರಾಗಲು ಧಾಮುಲ್ ನಿರ್ಧರಿಸಿದೆ. ಈ ಕುರಿತು ಈಚೆಗೆ ನಡೆದ ಸಭೆಯಲ್ಲಿ ಪ್ಲಾಸ್ಟಿಕ್ ಪ್ಯಾಕೆಟ್‌ಗಳನ್ನು ಗ್ರಾಹರಿಂದ ಪಡೆದು ರಿಸೈಕಲ್‌ಗೆ ಒಳಪಡಿಸುವ ಕಾರ್ಯ ಯೋಜನೆ ಬಗ್ಗೆ ಚರ್ಚೆಯಾಗಿದೆ. ಶೀಘ್ರ ಇದರ ಅನುಷ್ಠಾನಕ್ಕೆ ಮುಂದಾಗುವ ಸಾಧ್ಯತೆ ಇದೆ. ಸದ್ಯ ಧಾರವಾಡ, ಹಾವೇರಿ, ಗದಗ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಧಾಮುಲ್ ಒಳಗೊಂಡಿದೆ.

ಈ ಹಾಲು ಒಕ್ಕೂಟವು 28 ತಾಲೂಕ ಕುಗಳ ವ್ಯಾಪ್ತಿಯಲ್ಲಿ 995 ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಹೊಂದಿದೆ. ಪ್ರತಿನಿತ್ಯ 2.10 ಲಕ್ಷ ಹಾಲಿನ ಸಂಸ್ಕರಣೆ ಮಾಡ ಲಾಗುತ್ತಿದ್ದು, ನಂದಿನಿ ಬ್ಯಾಂಡ್‌ನಡಿ 1.40 ಲಕ್ಷ ಲೀ. ಹಾಲನ್ನು ವಿತರಣೆ ಮಾಡುತ್ತಿದೆ. 1 ಲೀಟರ್, ಅರ್ಧ ಲೀಟರ್, 200 ಎಂಎಲ್, 100 ಎಂಎಲ್ ಹಾಲನ್ನು ಪ್ಯಾಕೆಟ್‌ಗಳಲ್ಲಿ ಮಾರುತ್ತಿದೆ. ಜತೆಗೆ 0.09 ಲಕ್ಷ ಕೆಜಿ ಮೊಸರನ್ನು ಮಾರುತ್ತದೆ. ಇವುಗಳಿಂದ ಸಾಕಷ್ಟು ಪ್ಲಾಸ್ಟಿಕ್ ಹೊರಬರುತ್ತದೆ. ಇವುಗಳನ್ನೀಗ ಹಾಲು ಪೂರೈಕೆಯಾದ ಮರುದಿನ ಸಂಗ್ರಹಿಸಲು ಧಾಮುಲ್ ಚಿಂತನೆ ನಡೆಸಿದೆ. ರಸ್ತೆ, ಇತರೆ ಪ್ಲಾಸ್ಟಿಕ್ ಉತ್ಪನ್ನಕ್ಕೆ ಇದನ್ನು ಮರುಬಳಸುವ ಚಿಂತನೆ ಇದೆ.

ಈ ಕುರಿತು ಕನ್ನಡಪ್ರಭ ಜೊತೆ ಮಾತನಾಡಿದ ಧಾಮುಲ್ ವ್ಯವಸ್ಥಾಪಕ ನಿರ್ದೇಶಕ ಡಾ. ಕೆ. ಎಂ. ಲೋಹಿತೇಶ್ವರ, ಎಸ್‌ಯುಪಿ ನಿಯಂತ್ರಣದ ಕುರಿತು ಸರ್ಕಾರ ಮುಂದಿನ ದಿನಗಳಲ್ಲಿ ಸೂಕ್ತ ಕಾನೂನು ಜಾರಿಗೊಳಿಸುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಹಾಲು, ಮೊಸರಿನ ಪ್ಲಾಸ್ಟಿಕ್ ಸಂಗ್ರಹಿಸುವ ಕುರಿತು ಚರ್ಚೆಯಾಗಿದೆ. ನಂದಿನಿ ಔಟ್‌ಲೆಟ್ ಮೂಲಕ ಹಾಗೂ ಇತರೆ ಅಂಗಡಿಗಳಿಂದ ಹಾಲು, ಮೊಸರಿನ ಪ್ಯಾಕೆಟ್ ಸಂಗ್ರಹಿಸುವ ಕುರಿತು ಯೋಚನೆ ಇದೆ ಎಂದರು.

ಯಾವ ರೀತಿ ಸಂಗ್ರಹ ಮಾಡಬೇಕು ಹಾಗೂ ಸಂಗ್ರಹಿಸಿದ ಪ್ಲಾಸ್ಟಿಕ್‌ನ್ನು ರಿಸೈಕಲ್‌ಗೆ ಒಳಪಡಿಸುವುದು ಹೇಗೆ ? ಎಂಬುದರ ಬಗ್ಗೆ ಯೋಜನೆ ರೂಪಿಸಿಕೊಳ್ಳಲಾಗುತ್ತಿದೆ. ಇವೆರಡಕ್ಕೂ ಪ್ರತ್ಯೇಕ ಎರಡು ಏಜೆನ್ಸಿ ನೇಮಿಸುವ ಬಗ್ಗೆ ಮಾತುಕತೆ ನಡೆದಿದೆ. ಮನೆ-ಮನೆಯಿಂದ ಪ್ಲಾಸ್ಟಿಕ್ ಸಂಗ್ರಹಿಸುವ ಬಗ್ಗೆ, ಮದುವೆ ಸೇರಿ ಇನ್ನಿತರೆ ಕಾರ್ಯಕ್ರಮ ನಡೆಯುವ ಚೌಟ್ರಿಗಳಿಂದ ಹಾಲಿನ ಪ್ಯಾಕೆಟ್ ಸಂಗ್ರಹಿಸುವುದು ಹೇಗೆ ಎಂಬ ಚರ್ಚೆ ನಡೆಸಿದ್ದೇವೆ ಎಂದು ತಿಳಿಸಿದರು.

## ವಿದ್ಯಾನಗರ ಪಿಎಸ್‌ಐ ಹೊಳಿ ಎತ್ತಂಗಡಿ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ವಿಶ್ವ ಹಿಂದೂ ಪರಿಷತ್ ಪದಾಧಿಕಾರಿ ಮೇಲೆ ಹಲ್ಲೆ ಮಾಡಿದ್ದಾರೆಂದು ದೂರಿ ಸಂಘಟನೆ ಮುಖಂಡರು ವಿದ್ಯಾನಗರ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ವರ್ಗಾವಣೆಗೆ ಒತ್ತಾಯಿಸಿದ ಮರುದಿನವೇ ಇನ್‌ಸ್ಪೆಕ್ಟರ್ ಮಹಾಂತೇಶ ಹೊಳಿ ಅವರನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿದೆ. ಇನ್ನು, ಹಲ್ಲೆ ಪ್ರಕರಣದ ದೂರಲ್ಲಿ ಕೇಳಿಬಂದಿದ್ದ ಕಾನ್‌ಸ್ಟೇಬಲ್ ಕೃಷ್ಣ ಮೊಟೆ ಬೆನ್ನೂರ ಅವರನ್ನು ಉಪನಗರ ಪೊಲೀಸ್ ಠಾಣೆಗೆ ವರ್ಗಾಯಿಸಲಾಗಿದೆ ಎಂದು ಪೊಲೀಸ್ ಮೂಲಗಳು ದೃಢಪಡಿಸಿವೆ. ಪತ್ರಕರ್ತರ ಜೊತೆ ಮಾತನಾಡಿರುವ ಮಹಾನಗರ ಪೊಲೀಸ್ ಆಯುಕ್ತರು ಕೂಡ ವರ್ಗಾವಣೆ ಆಗಿದೆ ಎಂದು ತಿಳಿಸಿದ್ದಾರೆ. ಕಳೆದ ಸೋಮವಾರ ಕಿಮ್ಸ್‌ನ ಕ್ವಾರ್ಟರ್ಸ್‌ನಲ್ಲಿ ನಡೆದಿದ್ದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿ ವಿಶ್ವ ಹಿಂದೂ ಪರಿಷತ್‌ನ ಪದಾಧಿಕಾರಿ ಮಲ್ಲಿಕಾರ್ಜುನ ಸತ್ತಿಗೇರಿ ಎಂಬುವವರ ಮೇಲೆ ಇನ್‌ಸ್ಪೆಕ್ಟರ್ ಹಲ್ಲೆನಡೆಸಿದ್ದಾರೆ ಎಂದು ವಿಹಿಂಪ ದೂರಿತ್ತು. ಮಂಗಳವಾರ ವಿದ್ಯಾನಗರ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ ಮೂರು ದಿನದಲ್ಲಿ ವರ್ಗಾವಣೆ ಮಾಡಿ, ಇಲ್ಲವೆ ಅಮಾನತ್ತು ಮಾಡಿ ಎಂದು ಒತ್ತಾಯಿಸಿದ್ದರು. ಘಟನೆಯ ಮರುದಿನವೇ ಇನ್‌ಸ್ಪೆಕ್ಟರ್ ವರ್ಗಾವಣೆ ಆಗಿದ್ದು, ರಾಜಕೀಯ ಒತ್ತಡ ಕೂಡ ಇದರ ಹಿಂದೆ ಕೆಲಸ ಮಾಡಿದೆಯೆ ಎಂಬ ಅನುಮಾನಕ್ಕೆ ಪುಷ್ಟಿ ನೀಡಿದೆ.

## ಆಹಾರ ಧಾನ್ಯ ವಿತರಣೆ

**ಹುಬ್ಬಳ್ಳಿ:** ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಹಾಗೂ ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ ಪಡಿತರ ಫಲಾನುಭವಿಗಳಿಗೆ ಜೂನ್ ತಿಂಗಳ ಆಹಾರ ಧಾನ್ಯ ವಿತರಿಸಲಾಗುತ್ತಿದೆ. ಅಂತ್ಯೋದಯ ಪಡಿತರ ಚೀಟಿಗೆ 15 ಕೆಜಿ ಅಕ್ಕಿ ಹಾಗೂ 20 ಕೆಜಿ ಜೋಳ ಮತ್ತು ಬಿಪಿಎಲ್ ಪಡಿತರ ಚೀಟಿ ಹೊಂದಿದ ಪ್ರತಿ ಸದಸ್ಯರಿಗೆ 3 ಕೆಜಿ ಅಕ್ಕಿ ಹಾಗೂ 2 ಕೆಜಿ ಜೋಳವನ್ನು ಉಚಿತವಾಗಿ ವಿತರಿಸಲಾಗುತ್ತಿದೆ.


**ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ**
**ಸಾಮಾಜಿಕ ಅರಣ್ಯ ವಿಭಾಗ, ಕೋಲಾರ.**

ಸಂಖ್ಯೆ: ಎ2/ಬಿಯುಡಿ/ಟೆಂಡರ್/ಸಿಆರ್-19/2021-22 ದಿನಾಂಕ: 04.06.2022

("ಇ"ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ)

ಈ ಮೂಲಕ ಈ ವಿಭಾಗದ ನೊಂದಾಯಿತ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, 2022-23ಸಾಲಿನಲ್ಲಿ ಕೋಲಾರ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಗೆ ಒಳಪಡುವ ಕೋಲಾರ, ಮಾಲೂರು, ಬಂಗಾರಪೇಟೆ, ಮುಳಬಾಗಿಲು, ಶ್ರೀನಿವಾಸಪುರ ಮತ್ತು ಕೆ.ಜಿ.ಎಫ್ ಸಾಮಾಜಿಕ ಅರಣ್ಯ ವಲಯಗಳಲ್ಲಿ ಸಾಮಾಜಿಕ ಅರಣ್ಯ ವಲಯಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿ ಇತರೇ ಕಾಮಗಾರಿಗಳನ್ನು ಕೈಗೊಳ್ಳಲು ಈ ವಿಭಾಗದಲ್ಲಿ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ **ದಿನಾಂಕ: 24.06.2022ರಂದು** ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ.

**ಮೊದಲನೇ ಬಾರಿಗೆ: (1)** ಟೆಂಡರ್ ಫಾರಂಗಳನ್ನು ಪಡೆಯಲು ಕೊನೆಯ ದಿನಾಂಕ: **16.06.2022. (2)** ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **22.06.2022. (3)** ತಾಂತ್ರಿಕ ಬಿಡ್ ತೆರೆಯಲು ಕೊನೆಯ ದಿನಾಂಕ: **23.06.2022. (4)** ಆರ್ಥಿಕ ಬಿಡ್ ತೆರೆಯಲು ಕೊನೆಯ ದಿನಾಂಕ: **24.06.2022.**

ಸದರಿ ದಿನದಂದು ಟೆಂಡರ್ ನಡೆಯದಿದ್ದಲ್ಲಿ, ಟೆಂಡರ್‌ಗಳು ಬಾರದಿದ್ದಲ್ಲಿ ಅದೇ ಷರತ್ತಿಗೊಳಪಟ್ಟು ಎರಡನೇ ಬಾರಿಗೆ **ದಿನಾಂಕ: 30.06.2022ರಂದು** ಪುನಃ ಮರು ಟೆಂಡರ್ ಆಹ್ವಾನಿಸಲಾಗಿರುತ್ತದೆ. **ಹೆಚ್ಚಿನ ವಿವರಗಳಿಗೆ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.**

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ವಿಭಾಗ, ಕೋಲಾರ.

ವಾ.ಸಾ.ಸಂ.ಇ/ಕೋಲಾರ/ಆರ್.ಟಿ.ಸಂಖ್ಯೆ 146/ಎಂಸಿಎ/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ICICI Home Finance

**ಕಾರ್ಪೊರೇಟ್ ಕಛೇರಿ:** ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಎಚ